AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ವಚನಗಳಲ್ಲಿ ಅಂತರಂಗ – ಬಹಿರಂಗ ಶುದ್ಧಿ

**ಡಾ. ಹೆಚ್. ಎಂ. ಮಲ್ಲಿಕಾರ್ಜುನ**
ಹುಸ್ಕೂರು ಗ್ರಾಮ, ನಂಜನಗೂಡು ತಾಲ್ಲೂಕು
ಮೈಸೂರು ಜಿಲ್ಲೆ 571315.
mallikarjunahm2012@gmail.com

12ನೇ ಶತಮಾನದಲ್ಲಿ ಶರಣರಿಂದ ನಡೆದ ಚಳುವಳಿ ವಿಶಾಲ ವ್ಯಾಪ್ತಿಯನ್ನೊಳಗೊಂಡಿತ್ತು. ಅದು ಜಾತಿವಿನಾಶ, ಸ್ತ್ರೀ ಸಮಾನತೆ, ಸಹಭೋಜನ, ಸಹೋದರತ್ವ, ಕಾಯಕದ ಮಹತ್ವ, ದಾಸೋಹ ಹೀಗೆ ನೂರಾರು ರೀತಿಯ ಮಜಲುಗಳನ್ನು ಸೃಷ್ಟಿಸಿಕೊಂಡು ಆ ಮೂಲಕ ಮನುಷ್ಯರೆಲ್ಲರನ್ನೂ ಸಮಾನವೇದಿಕೆಗೆ ತರುವ ಪರಿಕಲ್ಪನೆ ಬಸವಾದಿ ಶರಣರದ್ದು. ಶತಮಾನಗಳಿಂದ ಬೇರೂರಿದ್ದ ಮೌಢ್ಯಗಳನ್ನು ಹೋಗಾಲಾಡಿಸಿ ಜನರನ್ನು ವೈಚಾರಿಕ ಮಾರ್ಗದೆಡೆಗೆ ತರುವುದು ಅವರ ಪ್ರಧಾನ ಉದ್ದೇಶವಾಗಿತ್ತು.

ವಚನಗಳಲ್ಲಿ ಸತಿ–ಪತಿ ಭಾವ, ವಚನಗಳಲ್ಲಿ ಗುರು–ಲಿಂಗ–ಜಂಗಮ, ವಚನಗಳಲ್ಲಿ ನಡೆನುಡಿ ಸಿದ್ಧಾಂತ, ವಚನಗಳಲ್ಲಿ ಭಕ್ತಿ, ವಚನಗಳಲ್ಲಿ ಶರಣ, ವಚನಗಳಲ್ಲಿ ಪಂಚಾಚಾರ, ವಚನಗಳಲ್ಲಿ ಅಷ್ಟಾವರಣ, ವಚನಗಳಲ್ಲಿ ಸಾಮಾಜಿಕ ಸಮಾನತೆ, ವಚನಗಳಲ್ಲಿ ಜಾತಿವಿನಾಶ ಹೀಗೆ ಹತ್ತು ಹಲವು ಸಂಗತಿಗಳನ್ನು ಇರಿಸಿಕೊಂಡು ವಚನಗಳನ್ನು ವಿಶ್ಲೇಷಣೆಗೆ ಒಳಗುಮಾಡಬಹುದು.

ವಚನ ಎಂದರೆ ಮಾತು, ಭಾಷೆ ಎಂದರ್ಥ. ಇದರಲ್ಲಿ ನಡೆನುಡಿಗೆ ಪ್ರಾಧಾನ್ಯತೆ ಇದೆ. ಯಾವುದೇ ಮನುಷ್ಯನು ಅಂತರಂಗ ಮತ್ತು ಬಹಿರಂಗವೆರಡರಲ್ಲಿಯೂ ಏಕತಾನತೆಯಿಂದ ನಡೆದುಕೊಳ್ಳಬೇಕೆಂಬುದನ್ನು ವಚನಗಳ ಹಿನ್ನೆಲೆಯಿಂದ ಪ್ರತಿಪಾದಿಸಬಹುದು. ಒಳಹೊರಗೆರಡರಲ್ಲಿಯೂ ಪರಿಶುದ್ಧತೆಯನ್ನು ಕಾಯ್ದುಕೊಳ್ಳಬೇಕಾದ್ದು ಶರಣನ ಆದ್ಯ ಕರ್ತವ್ಯ ಎಂದೇ ಬಸವಾದಿ ಶರಣರು ತಿಳಿಸಿದ್ದಾರೆ.

ಅಂತರಂಗ–ಬಹಿರಂಗ ಎಂಬ ಪದವು 61 ಶರಣರ 342 ವಚನಗಳಲ್ಲಿ 416 ಕಡೆ ವಚನಗಳಲ್ಲಿ ಬಳಕೆಯಾಗಿದೆ. ಈ ವಚನಗಳು ಮಾತ್ರವಲ್ಲದೇ ಇನ್ನುಳಿದ ಬಹುತೇಕ ವಚನಗಳು ಅಂತರಂಗ ಬಹಿರಂಗ ಶುದ್ಧಿಯ ಬಗ್ಗೆ ಚರ್ಚಿಸಿವೆ ಎಂಬುದನ್ನೂ ನಾವಿಲ್ಲಿ ಮನಗಾಣಬೇಕಿದೆ. ವಚನಗಳ ಹಿನ್ನೆಲೆಯಲ್ಲಿಯೇ ಈ ವಿಚಾರವನ್ನು ಇಲ್ಲಿ ಶೋಧನಾತ್ಮಕವಾಗಿ ಚರ್ಚಿಸಲಾಗುವುದು.

ಅಂತರಂಗ–ಬಹಿರಂಗ ಎಂಬ ಪದಗಳನ್ನಿಡಿದು ಸಾಗಿದಾಗ ನಮಗೆ ಸಾಕಷ್ಟು ಸಂಗತಿಗಳು ಎದುರಾಗುತ್ತವೆ. ಯಾವುದು ಅಂತರಂಗ, ಯಾವುದು ಬಹಿರಂಗ ಎಂಬ ಪ್ರಶ್ನೆಯೂ ಬರದಿರದು. ಅಂತಹ ಕೆಲವೊಂದು ಪದಗಳನ್ನು ಪರಸ್ಪರ ಅವು ಹೊಂದಿರುವ ಸಂಬಂಧಗಳ ಹಿನ್ನೆಲೆಯಲ್ಲಿ ಈ ಕೆಳಗೆ ಸೂಚಿಸಲಾಗಿದೆ. ಇವುಗಳೇ ಅಲ್ಲದೇ ಇನ್ನೂ ಹಲವಾರು ಪದಗಳನ್ನು ಈ ನೆಲೆಗಟ್ಟಿನಲ್ಲಿ ಗುರುತಿಸಬಹುದು.

| | |
|---|---|
| ಅಂತರಂಗ | ಬಹಿರಂಗ |
| ಭಾವ | ಬದುಕು |
| ಚಿಂತನೆ | ನುಡಿ |
| ಭಕ್ತಿ | ಆಚರಣೆ |
| ಜ್ಞಾನ | ಕ್ರಿಯೆ |
| ಹಸಿವು | ದಾಸೋಹ |
| ಮನಸ್ಸು | ದೇಹ |
| ಸತ್ಯ | ಸಾಕ್ಷಾತ್ಕಾರ |

ಅಂತರಂಗ – ಬಹಿರಂಗ ಎಂಬುದು ಎರಡಲ್ಲದ್ದು ಎಂದು ವ್ಯಾಖ್ಯಾನಿಸಬಹುದು. ಅಲ್ಲಮಪ್ರಭುಗಳು ಶರಣ ಮತ್ತು ದೇವನ ಸಂಬಂಧವನ್ನು ಕುರಿತು ತಮ್ಮ ವಚನದಲ್ಲಿ ತಿಳಿಸಿದ್ದಾರೆ.

> ಶಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ
> ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಯಬ್ದದಂತೆ
> ಗುಹೇಶ್ವರಾ ನಿಮ್ಮ ಶರಣ ಸಂಬಂಧ[1]

ಬಹಿರಂಗ ಸ್ವರೂಪಿಯಾದ ಶಿಲೆ, ನೀರು, ಬೀಜ, ಶಬ್ದ, ಶರಣ ಇವುಗಳ ಅಂತರಂಗದಲ್ಲಿ ಕ್ರಮವಾಗಿ ಅಗ್ನಿ, ಪ್ರತಿಬಿಂಬ, ವೃಕ್ಷ, ನಿಶ್ಯಬ್ದ, ದೇವ ಇವುಗಳ ಇರುವಿಕೆಯನ್ನು ಈ ವಚನ ಪ್ರತಿಪಾದಿಸುತ್ತಿದೆ. ಅವು ಅಗೋಚರವಾಗಿ ನೆಲೆಸಿರುವಿಕೆಯನ್ನು ಅರಿಯಬೇಕಿದೆ. ಪರಸ್ಪರ ಶಿಲೆಯನ್ನು ತಾಕಿಸಿದರೆ ಅಥವಾ ಘರ್ಷಣೆಗೆ ಒಳಗುಮಾಡಿದರೆ ಅಗ್ನಿ ಹುಟ್ಟುತ್ತದೆ. ನೀರಿನಲ್ಲಿ ಇರುವ ಪ್ರತಿಬಿಂಬ ಯಾವುದೇ ಕಲ್ಮಷಗಳಿಗೆ, ದೋಷಗಳಿಗೆ ಒಳಗಾಗದೆ ಇರುತ್ತದೆ. ಬೀಜವನ್ನು ಭೂಮಿಗೆ ಬಿತ್ತಿ ಪೋಷಣೆ ಮಾಡಿದಾಗ ಅದರಲ್ಲಿನ ಚೈತನ್ಯ ಶಕ್ತಿಯಿಂದ ಗಿಡವಾಗಿ ಮರವಾಗುತ್ತದೆ. ಶಬ್ದವು ಶ್ರವಣೇಂದ್ರಿಯದ ಮೂಲಕ ಗ್ರಹಿಸುವಂಥದ್ದು, ಇದರ ಹಿಂದೆ ನಿಶ್ಯಬ್ದವೂ ಅಡಗಿದೆ ಅದನ್ನು ಗುರುತಿಸಬೇಕು, ಅಂತೆಯೇ ನಿಷ್ಕಲ್ಮಷ ಮನಸ್ಸಿನ ಭಕ್ತನ ಅಂತರಂಗದಲ್ಲಿ ಗುಹೇಶ್ವರನು ನೆಲೆಸಿದ್ದಾನೆ ಎಂದು ಅಲ್ಲಮಪ್ರಭುಗಳು ತಿಳಿಸಿದ್ದಾರೆ. ಇಲ್ಲಿರುವ ಎಲ್ಲವೂ ಲೌಕಿಕದ ವಸ್ತುಗಳೇ ಆದರೂ ಅವುಗಳ ಅಂತರಂಗದೊಳಗೆ ಅಗೋಚರವಾದ ಶಕ್ತಿ ಅಡಗಿದೆ ಅದೇ ದೈವಸ್ವರೂಪಿಯಾದುದು. ಇದೇ ಅಂತರಂಗ ಮತ್ತು ಬಹಿರಂಗದ ನಡುವೆ ಇರುವ ಅಂತಸ್ಸಂಬಂಧವನ್ನು ತಿಳಿಸುತ್ತದೆ. ಇದಲ್ಲದೆ ಶಿಲೆಯನ್ನು ಪುಡಿ ಮಾಡಿದರೆ ಅಗ್ನಿಯಿಲ್ಲ, ನೀರನ್ನು ಕಲಕಿದರೆ ಪ್ರತಿಬಿಂಬವಿಲ್ಲ, ಬೀಜವನ್ನು ಎರಡು ಭಾಗ ಮಾಡಿದರೆ ಸಸ್ಯದ ಉತ್ಪತ್ತಿ ಇಲ್ಲ, ಎಡೆಯಿಲ್ಲದೆ ನಿರಂತರವಾಗಿ ಶಬ್ದಗೈದರೆ ನಿಶ್ಯಬ್ದದ ಅರಿವಿಲ್ಲ ಅಂತೆಯೇ ಶರಣ ಲೌಕಿಕದಲ್ಲಿ ಮುಳುಗಿದರೆ ದೈವನ ಸಾಕ್ಷಾತ್ಕಾರವಿಲ್ಲವೆಂಬುದನ್ನು ಅರಿಯಬೇಕಿದೆ.

ಶರಣ ಸಾಹಿತ್ಯಲೋಕದ ಮೊದಲ ಸ್ತ್ರೀ ಸಮಾನತಾವಾದಿ, ಕವಯತ್ರಿ, ವೈರಾಗ್ಯನಿಧಿಯಾಗಿರುವ ಮಹಾದೇವಿ ಅಕ್ಕನವರು ಬದುಕನ್ನು ಆದರ್ಶಮಯವನ್ನಾಗಿಸಿಕೊಂಡವರು. ಲೌಕಿಕದ ಆಡಂಬರದ ಬದುಕಿನ ಬಲೆಗೆ ಬೀಳದೆ, ಆಧ್ಯಾತ್ಮದ ಸುಖವನ್ನುಂಡವರು. ಅವರ ಒಂದು ವಚನದಲ್ಲಿ ಅಂತರಂಗ–ಬಹಿರಂಗದ ಮಹತ್ವವನ್ನು ಅರಿಯಬಹುದು.

ಬೆಟ್ಟಕ್ಕೆ ಸಾರವಿಲ್ಲೆಂಬರು
ತರುಗಳು ಹುಟ್ಟುವ ಪರಿ ಇನ್ನೆಂತಯ್ಯಾ
ಇದ್ದಲಿಗೆ ರಸವಿಲ್ಲೆಂಬರು
ಕಬ್ಬುನ ಕರಗುವ ಪರಿ ಇನ್ನೆಂತಯ್ಯಾ
ಎನಗೆ ಕಾಯವಿಲ್ಲೆಂಬರು
ಚೆನ್ನಮಲ್ಲಿಕಾರ್ಜುನನೊಲಿವ ಪರಿ ಇನ್ನೆಂತಯ್ಯಾ?[2]

ಮೇಲುನೋಟಕ್ಕೆ ಎತ್ತರವಾಗಿ, ಕಲ್ಲು, ಮಣ್ಣುಗಳಿಂದ ಆವೃತವಾದ ಬೆಟ್ಟವು ನಿಸ್ಸಾರದಂತೆ ಗೋಚರವಾಗುತ್ತದೆ. ಆದರೂ ಅಲ್ಲಿ ಗಿಡಮರಬಳ್ಳಿಗಳು ಹೆಚ್ಚೇಚ್ಚವಾಗಿ ಸಮೃದ್ಧವಾಗಿ ಬೆಳೆಯುತ್ತದೆ. ಇದು ಪರಮಾಶ್ಚರ್ಯ ಎಂದೆನ್ನಿಸುತ್ತದೆ. ಬೆಂಕಿಯ ಕಾವಿನಿಂದ ಬೆಂದಿರುವ ಕಟ್ಟಿಗೆಯ ಇದ್ದಿಲು ರಸವಿಲ್ಲದಂತೆ ಕಂಡರೂ ಅದರ ಕಾವಿನಿಂದ ಕಬ್ಬಿಣವೇ ಕರಗುತ್ತದೆ. ಬೆಟ್ಟ ಮತ್ತು ಇದ್ದಿಲಿನ ಅಂತರಂಗದೊಳಗೆ ಅಂತರ್ಗತವಾಗಿದ್ದ ಸತ್ವವು ಹೊರಗೆ ಗೋಚರವಾಗಲಿಲ್ಲ ಆದರೂ ಅದು ಸಂದರ್ಭಾನುಸಾರಿಯಾಗಿ ತನ್ನ ಶಕ್ತಿಯನ್ನು ತೋರಿಸಿತು ಅದರಿಂದ ಉತ್ತಮ ಪ್ರತಿಫಲವೂ ಸಿಕ್ಕಿತು. ಅಂತೆಯೇ ಮನುಷ್ಯನ ಅಂತರಂಗದ ಶಕ್ತಿ ಗೋಚರವಾಗುವುದಿಲ್ಲ, ಆದರೆ ಚಿತ್ತಶುದ್ಧಿಯಿಂದ ಮಾಡಿದ ಭಕ್ತಿಯಿಂದ ದೇವನ ಒಲುಮೆ ಸಾಧ್ಯ ಎಂಬುದನ್ನು ಈ ವಚನ ಪ್ರತಿಪಾದಿಸುತ್ತದೆ.

ಯಾವುದೇ ವ್ಯಕ್ತಿಯ ಹುಟ್ಟು, ಹಿನ್ನೆಲೆ, ವೃತ್ತಿ ಭಿನ್ನವಾಗಿರುತ್ತದೆ. 12ನೇ ಶತಮಾನದ ಕಾಲದಲ್ಲಿ ಎಲ್ಲರೂ ವಿವಿಧೆಡೆಯೆಂದ ಬಂದು ನೆಲೆಸಿದವರು. ಉರಿಲಿಂಗಪೆದ್ದಿ ಎಂಬ ಶರಣನ ಮೊದಲ ಹೆಸರು ಪೆದ್ದಣ ಎಂಬುದಾಗಿತ್ತು ಆತನ ಪತ್ನಿ ಕಾಳವ್ವೆ. ಈತ ಮೊದಲು ಕಳ್ಳತನ ಮಾಡಿ ತನ್ನ ಜೀವನವನ್ನು ಸಾಗಿಸುತ್ತಿದ್ದನು. ಉರಿಲಿಂಗದೇವರು ಎಂಬ ಗುರುವಿನ ಮಾರ್ಗದರ್ಶನ ಮತ್ತು ಲಿಂಗದೀಕ್ಷೆ ಸಿಕ್ಕ ಕಾರಣದಿಂದ ಈತ ಸಾತ್ವಿಕ ಶರಣನಾಗಿ ಬದಲಾವಣೆಯಾದನು. ಮುಂದೆ ಉರಿಲಿಂಗಪೆದ್ದಿ ಎಂದೂ ಈತ ನೆಲೆಸಿದ ಮಠ ಉರಿಲಿಂಗಪೆದ್ದಿ ಮಠ ಎಂತಲೂ ಪ್ರಸಿದ್ಧಿಯಾಯಿತು. ಈ ಪ್ರಸಿದ್ಧ ವಚನಕಾರ ತನ್ನೊಂದು ವಚನದಲ್ಲಿ ಅಂತರಂಗ–ಬಹಿರಂಗದ ಬಗ್ಗೆ ತನ್ನದೇ ಜಿಜ್ಞಾಸೆ ಮಾಡಿದ್ದಾನೆ.

ಅಂತರಂಗ ಬಹಿರಂಗವೆಂದೆಂಬರು
ಆವುದು ಹಿಂದು ಆವುದು ಮುಂದು ಎಂದರಿಯರು
ಎಳ್ಳೊಳಗಣ ಎಣ್ಣೆಯಂತೆ, ಕಲ್ಲೊಳಗಣ ಹೇಮದಂತೆ
ಹಲೊಳಗಣ ತುಪ್ಪದಂತೆ, ಕಾಷ್ಠದೊಳಗಣ ಅಗ್ನಿಯಂತೆ
ಪುಷ್ಪದೊಳಗಣ ಪರಿಮಳದಂತೆ
ಭಾವದೊಳಗೆ ಶಿವನಿಪ್ಪನೆಂದಡೆ
ಆ ಶಿವನು ಕಾಣಿಸಿಕೊಳ್ಳನು ಮಥನದಿಂದಲ್ಲದೆ[3]

ಕ್ರಿಯೆಯಿಂದಲ್ಲದೆ ಜ್ಞಾನ ಸಿಗದು, ಜ್ಞಾನಿಗಳ ಸಂಗದಿಂದಲ್ಲದೇ, ವಿಚಾರ ಮಥನದಿಂದಲ್ಲದೇ ಶಿವನಿಲ್ಲ ಎಂಬಂತಹ ಅಂಶವನ್ನು ಉರಿಲಿಂಗಪೆದ್ದಿಯ ಈ ವಚನ ತಿಳಿಸುತ್ತಿದೆ.

ಬಸವಣ್ಣನವರು ವಚನ ಚಳುವಳಿಯ ನೇತಾರರು. ಅವರು ಅಂತರಂಗ ಬಹಿರಂಗ ಶುದ್ಧಿಗೆ ಛಲವಿರಬೇಕು. ಛಲವಿಲ್ಲದವರ ಕೂಡಲಸಂಗಮದೇವ ಮೆಚ್ಚುವುದಿಲ್ಲ ಎಂದು ತಮ್ಮ ವಚನದಲ್ಲಿ ತಿಳಿಸಿದ್ದಾರೆ. ಅಂತರಂಗದ ಬಯಕೆ, ಬಹಿರಂಗದ ಬಯಕೆ ಕ್ಷಯವಾದಾಗಲೇ ಪರಿಶುದ್ಧತೆ ಸಾಧ್ಯವೆನ್ನುತ್ತಾರೆ.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ
ಛಲಬೇಕು ಶರಣಂಗೆ ಲಿಂಗ–ಜಂಗಮ ಒಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲವಿಲ್ಲದವರ ಮೆಚ್ಚ ಕೂಡಲಸಂಗಮದೇವ[4]

ಆತ್ಮವಿಮರ್ಶೆಯ ಮೂಲಕ ಬದುಕನ್ನು ಹಸನುಮಾಡಿಕೊಳ್ಳಬೇಕೆಂಬ ತತ್ವ ಶರಣರಿಂದ ಅರಿಯಬೇಕಾದುದು. ಅದರಲ್ಲಿಯೂ ಬಸವಣ್ಣನವರು ಹೆಚ್ಚೇಚ್ಚವಾಗಿ ಆತ್ಮವಿಮರ್ಶೆಯ ಮಾದರಿಯ ವಚನಗಳನ್ನು ರಚಿಸಿದ್ದಾರೆ. ಅಂತೆಯೇ ತಮ್ಮ ಬದುಕನ್ನು ದೀಪ್ತಗೊಳಿಸಿಕೊಂಡು ಅನಂತರ ಸಮಾಜಕ್ಕೆ ಮಾರ್ಗದರ್ಶನವಿತ್ತಿದ್ದಾರೆ.

ವೈರಾಗ್ಯನಿಧಿಯಾದಂತಹ ಅಕ್ಕಮಹಾದೇವಿಯವರು ಪ್ರತಿಯೊಬ್ಬ ಮನುಷ್ಯನು ತನ್ನ ಆಸೆ ಆಮಿಷಗಳಿಗೆ ಅನುಗುಣವಾಗಿ ಅದನ್ನು ಈಡೇರಿಸಿಕೊಳ್ಳಲು ಮುಂದಾಗುತ್ತಾನೆ ಅದರಿಂದ ದುಃಖವನ್ನು ಅನುಭವಿಸುತ್ತಾನೆ. ಆದುದರಿಂದ ಸ್ಥಿರವಲ್ಲದ ಜೀವನದ ಬಗ್ಗೆ ಮೋಹಗೊಳ್ಳದೇ ಸಾರ್ಥಕ ಸಾಧನೆಯತ್ತ ಸಾಗಬೇಕೆಂದು ಅರುಹಿದ್ದಾರೆ.

ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ
ಮನ ಬಂದುದನು ಬಯಸಿ ಬೇವುತ್ತಿದ್ದೆನಯ್ಯಾ
ಎನ್ನ ಮನದ ದುರಾಶೆಯ ಮಾಣಿಸಿ ನಿಮ್ಮತ್ತ ತೋರಾ ಚೆನ್ನಮಲ್ಲಿಕಾರ್ಜುನ[5]

ಮನ ಬಯಸಿದ ಭಾವನೆಗಳ ಬೆನ್ನತ್ತಿದರೆ ಸಂಕಟ ತಪ್ಪದು ಎಂಬ ತಿಳುವಳಿಕೆ ಈ ವಚನದಲ್ಲಿ ಬಿಂಬಿತವಾಗುತ್ತಿದೆ. ಮನಸ್ಸು ಬಯಸಿದುದನ್ನು ಬಹಿರಂಗದ ಕ್ರಿಯೆಗಳು ನೆರವೇರಿಸಲು ತೊಡಗುತ್ತವೆ. ಈ ಪ್ರಕ್ರಿಯೆಗಳು ಜ್ಞಾನಸಂಬಂಧಿಯಾದವುಗಳಾದರೇ ಒಳಿತು, ಮೋಹಸಂಬಂಧಿಯಾದವುಗಳಾದರೆ ಸಾರ್ಥಕ ಬದುಕಿಗೆ ಅಡಚಣೆಯಾಗುತ್ತದೆ. ಆದುದರಿಂದ ಭಕ್ತಿಪರವಾದ ಚಿಂತನೆಯೆಡೆಗೆ ಸಾಗಬೇಕೆಂದು ತಿಳಿಸಿದ್ದಾರೆ.

ಷಣ್ಮುಖಸ್ವಾಮಿ ಎಂಬುವ ವಚನಕಾರರು ಸೋಹಂ ಮತ್ತು ಶಿವೋಹಂ ಎಂಬ ಗರ್ವ, ಅಹಂಕಾರ ಭಾವಕ್ಕಿಂತ ದಾಸೋಹಂ ಭಾವ ಶ್ರೇಷ್ಠ ಎಂದು ಅರುಹಿದ್ದಾರೆ.

ಸೋಹಂ ಎಂದಡೆ ಅಂತರಂಗದ ಗರ್ವ
ಶಿವೋಹಂ ಎಂದಡೆ ಬಹಿರಂಗದ ಅಹಂಕಾರ
ಈ ಉಭಯವನಳಿದು ದಾಸೋಹಂ ಎಂದಡೆ ಪರಮಪದವು
ಇದು ಕಾರಣ ಎನಗೆ ದಾಸೋಹಂ ಭಾವವನೆ
ಕರುಣಿಸಿ ಬದುಕಿಸಯ್ಯಾ ಅಖಂಡೇಶ್ವರ[6]

ದಾಸೋಹಂ ಭಾವವು ಕಿಂಕರತ್ವವನ್ನು ಬೆಳೆಸುತ್ತದೆ. ಜೊತೆಗೆ ಗಳಿಕೆಯ ಮಿಗುತಾಯವನ್ನು ಜಂಗಮರಿಗೆ ಎರೆಯಬೇಕೆಂಬ ಅರಿವು ಕೊಟ್ಟವರು ಬಸವಾದಿ ಶರಣರು. ತಾನು ಬದುಕುವುದರ ಜೊತೆಗೆ ಇತರರೂ ಬದುಕಲಿ ಎಂಬ ಶರಣರ ಜೀವನಪ್ರೀತಿಯ ದ್ಯೋತಕವೇ ಈ ದಾಸೋಹ ಪರಿಕಲ್ಪನೆ.

ಸ್ವತಂತ್ರ ಸಿದ್ಧಲಿಂಗೇಶ್ವರ ಎಂಬುವ 15ನೇ ಶತಮಾನದ ವಚನಕಾರರು ಅಂತರಂಗ ಶುದ್ಧವಿಲ್ಲದವರು ಬಹಿರಂಗದಲ್ಲಿ ಸರ್ವಜನಮೆಚ್ಚುವಂತೆ ಪೋಷಾಕು ಧರಿಸುತ್ತಾರೆ. ಅದು ಲೋಕರಂಜನೆಯಾಗಿರುವುದಲ್ಲದೇ ಶಿವಮೆಚ್ಚುವ ಸಂಗತಿಯಲ್ಲವೆಂದು ಅರುಹಿದ್ದಾರೆ.

ಬಸವಣ್ಣನವರ ವಚನಗಳಲ್ಲಿಯೇ ಅಪೂರ್ವ ನಿಧಿಯೆನ್ನಿಸುವ ಒಂದು ವಚನ ಸಪ್ತ ಪಾತಕಗಳನ್ನು ಮಾಡದಿರಿ ಎಂದು ಬೋಧಿಸುತ್ತದೆ. ಅದು ಸಾರ್ವಕಾಲಿಕ ಮೌಲ್ಯವನ್ನು ಒಳಗೊಂಡಿರುವ ವಚನವಾಗಿದ್ದು; ನಿತ್ಯ ಅನುಕರಣೀಯವಾಗಿದೆ. ಈ ವಚನ ಮೇಲುನೋಟಕ್ಕೆ ಸ್ವಗತಕ್ಕೆ ಹೇಳಿಕೊಂಡಿರುವಂತೆ ಗೋಚರವಾಗುತ್ತದೆ. ಈ ಮಾದರಿಯ ಅನುಸರಣೆ ಪ್ರತಿಯೊಬ್ಬ ವಚನಕಾರನಲ್ಲಿಯೂ ಕಾಣಬಹುದು.

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಬಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ
ಇದೇ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ[7]

ಒಟ್ಟಾರೆಯಾಗಿ ಬಸವಾದಿ ಶರಣರು ತಮ್ಮೆಲ್ಲಾ ವಚನಗಳಲ್ಲಿಯೂ ಮನುಷ್ಯನಾದವನು ಮಹಾದೇವನಾಗುವ ಹಾದಿಯನ್ನು ತಿಳಿಸಿಕೊಟ್ಟಿದ್ದಾರೆ. ಮಾಡುವ ಕಾಯಕ ಆತ್ಮತೃಪ್ತಿಯನ್ನೂ, ಆತ್ಮಗೌರವವನ್ನು ಹೆಚ್ಚಿಸುವಂತಹದ್ದು, ಪ್ರತಿಯೊಬ್ಬರೂ ಅಂತರಂಗ-ಬಹಿರಂಗಶುದ್ಧಿಗಳಾಗಿರಬೇಕು. ತಮ್ಮ ಬದುಕು ಮತ್ತೊಬ್ಬರಿಗೆ ಮಾರ್ಗಪ್ರಾಯವಾಗಿರಬೇಕೆಂಬ ಉದಾತ್ತ ಚಿಂತನೆ ಇರಿಸಿಕೊಂಡವರು. ಅಂತೆಯೇ ನಡೆನುಡಿಯಲ್ಲಿ ಸದಾ ಒಂದೇ ಸಂಕಲ್ಪದಿಂದ ನಡೆದು ಲೋಕಕಲ್ಯಾಣಕ್ಕೆ ದುಡಿದು ಕಲ್ಯಾಣರಾಜ್ಯವನ್ನು ನಿರ್ಮಿಸಿದವರು. ಇಂತಹ ಬದುಕು ಸರ್ವಜನಾದರಣೀಯವಾಗಿದ್ದು, ಆದರ್ಶ ಅರಸಿ ಬರುವವರಿಗೆ ನಿಲುಗನ್ನಡಿಯಾಗಿ ತೋರುತ್ತಾ ಮಾರ್ಗದರ್ಶನ ಮಾಡುತ್ತಿದೆ.

**ಕೊನೆ ಟಿಪ್ಪಣಿಗಳು**

1. ಶ್ರೀ ಸಿದ್ಧೇಶ್ವರ ಸ್ವಾಮಿಗಳು: ಅಲ್ಲಮಪ್ರಭುದೇವರ ವಚನ-ನಿರ್ವಚನ: ವಚನ ಸಂಖ್ಯೆ – 1, ಪು.ಸಂ. 3, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು – 2001.
2. ಡಾ. ಎಂ. ಎಂ. ಕಲಬುರ್ಗಿ (ಪ್ರ.ಸಂ), ಡಾ. ವೀರಣ್ಣ ರಾಜೂರ (ಸಂ): ಬಸವಯುಗದ ವಚನ ಮಹಾಸಂಪುಟ: 1, ಸಮಗ್ರ ವಚನಸಂಪುಟ – 5, ಶಿವಶರಣೆಯರ ವಚನ ಸಂಪುಟ, ವಚನ ಸಂಖ್ಯೆ – 302, ಪು.ಸಂ. 817, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2016.
3. ಡಾ. ಎಂ. ಎಂ. ಕಲಬುರ್ಗಿ (ಪ್ರ.ಸಂ): ಬಸವಯುಗದ ವಚನ ಮಹಾಸಂಪುಟ: 1, ಸಮಗ್ರ ವಚನಸಂಪುಟ: ಆರು, ಸಂಕೀರ್ಣ ವಚನಸಂಪುಟ: ಒಂದು, ವಚನ ಸಂಖ್ಯೆ – 1265, ಪು.ಸಂ. 1077, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016.
4. ಡಾ. ಎಂ. ಎಂ. ಕಲಬುರ್ಗಿ (ಪ್ರ.ಸಂ): ಬಸವಯುಗದ ವಚನ ಮಹಾಸಂಪುಟ: 1, ಸಮಗ್ರ ವಚನಸಂಪುಟ: ಒಂದು, ಬಸವಣ್ಣನವರ ವಚನಸಂಪುಟ ವಚನ ಸಂಖ್ಯೆ – 677, ಪು.ಸಂ. 62, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016.
5. ಪೂರ್ವೋಕ್ತ 2, ವಚನ ಸಂಖ್ಯೆ – 232, ಪು.ಸಂ. 810.
6. ಡಾ. ಎಂ. ಎಂ. ಕಲಬುರ್ಗಿ (ಪ್ರ.ಸಂ): ಬಸವೋತ್ತರಯುಗದ ವಚನ ಮಹಾಸಂಪುಟ: 2, ಸಮಗ್ರ ವಚನಸಂಪುಟ –14, ಸಂಕೀರ್ಣ ವಚನ ಸಂಪುಟ – 9, ವಚನ ಸಂಖ್ಯೆ– 308, ಪು.ಸಂ. 1043, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016.
7. ಪೂರ್ವೋಕ್ತ 4, ವಚನ ಸಂಖ್ಯೆ – 235, ಪು.ಸಂ. 28.

**ಪರಾಮರ್ಶನ ಗ್ರಂಥಗಳು**

1. ಕಲಬುರ್ಗಿ ಎಂ.ಎಂ : ಬಸವಯುಗದ ವಚನ ಮಹಾಸಂಪುಟ: 1
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016.

: ಬಸವೋತ್ತರ ಯುಗದ ವಚನ ಮಹಾಸಂಪುಟ: 2
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016.

2. ಸಿದ್ಧೇಶ್ವರ ಸ್ವಾಮಿಗಳು : ಅಲ್ಲಮಪ್ರಭುದೇವರ ವಚನ-ನಿರ್ವಚನ
ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ
ಮೈಸೂರು – 2001.